ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 04/03/2020

# ಸಹಕಾರಿ ಬ್ಯಾಂಕ್ ಬಲವರ್ಧನೆ

## ಲೋಕಸಭೆಯಲ್ಲಿ ಮಸೂದೆ ಮಂಡನೆ | ಠೇವಣಿದಾರರ ಹಿತರಕ್ಷಣೆಗೆ ಕಾನೂನು

**ನವದೆಹಲಿ:** ಸಣ್ಣ ಠೇವಣಿದಾರರ ಹಿತರಕ್ಷಿಸುವ ನಿಟ್ಟಿನಲ್ಲಿ ಸಹಕಾರಿ ಬ್ಯಾಂಕ್‌ಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ನಿಯಂತ್ರಣ ಹೆಚ್ಚಿಸುವ ಮಸೂದೆಯನ್ನು ಸರ್ಕಾರ ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿದೆ.

ದೆಹಲಿ ಗಲಭೆ ಸಂಬಂಧ ಚರ್ಚೆ ನಡೆಯಬೇಕೆಂದು ಪ್ರತಿಪಕ್ಷಗಳು ಪಟ್ಟು ಹಿಡಿದಾಗ ಉಂಟಾದ ಗದ್ದಲದ ನಡುವೆಯೇ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬ್ಯಾಂಕಿಂಗ್ ನಿಯಂತ್ರಣ ತಿದ್ದುಪಡಿ ಮಸೂದೆ- 2020 ಅನ್ನು ಮಂಡಿಸಿದರು. ಪಂಜಾಬ್ ಮಹಾರಾಷ್ಟ್ರ ಸಹಕಾರಿ (ಪಿಎಂಸಿ) ಬ್ಯಾಂಕ್‌ನಂಥ ಬಿಕ್ಕಟ್ಟು ಭವಿಷ್ಯದಲ್ಲಿ ಸಂಭವಿಸಬಾರದೆಂಬುದೇ ಇದರ ಉದ್ದೇಶ ಎಂದು ನಿರ್ಮಲಾ ಹೇಳಿದರು.



ಬ್ಯಾಂಕ್‌ಗಳ ನಿಯಂತ್ರಣಕ್ಕೆ ಸಂಬಂಧಿಸಿದ ಆರ್‌ಬಿಐ ಮಾರ್ಗಸೂಚಿಗಳನ್ನು ಸಹಕಾರಿ ಬ್ಯಾಂಕ್‌ಗಳಿಗೂ ಕಟ್ಟುನಿಟ್ಟಾಗಿ ಅನ್ವಯಿಸಬೇಕೆನ್ನುವುದು ಪ್ರಸ್ತಾಪಿತ ತಿದ್ದುಪಡಿಯ ಮುಖ್ಯ ಉದ್ದೇಶವಾಗಿದೆ. ಆದರೆ, ಆಡಳಿತಾತ್ಮಕ ವಿಚಾರಗಳ ಮೇಲೆ ಸಹಕಾರಿ ರಿಜಿಸ್ಟ್ರಾರ್‌ರ ಮಾರ್ಗಸೂಚಿಗಳೇ ನಿಯಂತ್ರಣ ಹೊಂದಿರುತ್ತವೆ.

- **ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ದೇಶದ ವಿವಿಧ ಬ್ಯಾಂಕುಗಳು ಮತ್ತು ಆಯ್ದ ಹಣಕಾಸು ಸಂಸ್ಥೆಗಳಿಗೆ 1,43,068 ಕೋಟಿ ರೂಪಾಯಿ ವಂಚನೆ ನಡೆದಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದ್ದಾರೆ.**

### ಮೇಲ್ಮನೆಯಲ್ಲೂ ಗದ್ದಲ

ರಾಜ್ಯಸಭೆಯಲ್ಲೂ ಮಂಗಳವಾರ ಗದ್ದಲದ ಕಾರಣ ಕಲಾಪವನ್ನು ಮುಂದೂಡಲಾಯಿತು.




ಪ್ರತಿಪಕ್ಷ ಹಾಗೂ ಆಡಳಿತ ಪಕ್ಷ ಸದಸ್ಯರ ಮಾತಿನ ಚಕಮಕಿ, ಗದ್ದಲದಿಂದಾಗಿ ಕಲಾಪ ನಡೆಸಲು ಸಾಧ್ಯವಾಗದು ಎಂದ ಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಹೇಳಿದರು.

### ಪ್ರಲ್ಹಾದ್ ಜೋಶಿ ಮನವಿ

ದೆಹಲಿ ಗಲಭೆ ವಿಚಾರವನ್ನು ಶೂನ್ಯ ವೇಳೆಯಲ್ಲಿ ಚರ್ಚಿಸಲು ಸರ್ಕಾರ ಸಿದ್ಧವಿದೆಯೆಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಹೇಳಿದರೂ ವಿಪಕ್ಷದವರು ಅದಕ್ಕೂ ಕಿವಿಗೊಡಲಿಲ್ಲ.

### ಸಕ್ಕರೆ ಉತ್ಪಾದನೆ ಕುಸಿತ

ದೇಶದ ಸಕ್ಕರೆ ಉತ್ಪಾದನೆ ಪ್ರಸಕ್ತ 2019-20ನೇ ಸಾಲಿನಲ್ಲಿ ಶೇ. 18ರಷ್ಟು ಕುಸಿಯಲಿದೆ. 2.73 ಟನ್ ಉತ್ಪಾದನೆ ಆಗಬಹುದು ಎಂದು ಆಹಾರ ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಖಾತೆ ಸಚಿವ ಡಿ.ಆರ್. ದಾದಾರಾವ್ ಲೋಕಸಭೆಗೆ ತಿಳಿಸಿದರು. ಮಹಾರಾಷ್ಟ್ರ, ಕರ್ನಾಟಕ ಸೇರಿ ಪ್ರಮುಖ ರಾಜ್ಯಗಳಲ್ಲಿ ಕಬ್ಬು ಇಳುವರಿ ಕಡಿಮೆಯಾಗಿರುವುದೇ ಇದಕ್ಕೆ ಕಾರಣ ಎಂದರು.



### ಸಂಸತ್ ಕಲಾಪಕ್ಕೆ 2ನೇ ದಿನವೂ ಅಡ್ಡಿ

ದೆಹಲಿಯಲ್ಲಿ ನಡೆದ ವ್ಯಾಪಕ ಗಲಭೆಗಳ ಬಗ್ಗೆ ಚರ್ಚೆ ನಡೆಯಬೇಕೆಂದು ಪ್ರತಿಪಕ್ಷಗಳು ಪಟ್ಟು ಹಿಡಿದಿದ್ದರಿಂದ ಕೋಲಾಹಲ ಉಂಟಾಗಿ ಸಂಸತ್ತಿನ ಉಭಯ ಸದನಗಳ ಕಲಾಪಗಳನ್ನು ಬುಧವಾರಕ್ಕೆ ಮುಂದೂಡಲಾಯಿತು. ಬಜೆಟ್ ಅಧಿವೇಶನದ ಮುಂದುವರಿದ ಭಾಗ ಆರಂಭವಾದ ಸೋಮವಾರವೂ ಸಂಸತ್ ಕಲಾಪ ಸಿಎಎ ಗದ್ದಲಕ್ಕೆ ಆಹುತಿಯಾಗಿತ್ತು.

**» ಹಿಂಸಾಚಾರ ಕುರಿತು ಹೋಳಿ ನಂತರ ಚರ್ಚೆಗೆ ಸರ್ಕಾರ ಸಿದ್ಧವೆಂದ ಸ್ಪೀಕರ್**

ಬೆಳಗ್ಗೆ ಲೋಕಸಭೆ ಕಲಾಪ ಆರಂಭವಾಗುತ್ತಲೇ, ತಕ್ಷಣವೇ ಚರ್ಚೆ ಆರಂಭಿಸುವಂತೆ ಪ್ರತಿಪಕ್ಷಗಳು ಪಟ್ಟು ಹಿಡಿದಿದ್ದರಿಂದ ಬಿಜೆಪಿ ಮತ್ತು ವಿಪಕ್ಷ ಸದಸ್ಯರ ನಡುವೆ ಬಿಸಿಬಿಸಿ ವಾಗ್ವಾದ ನಡೆಯಿತು. ಹೋಳಿ ಹಬ್ಬದ ನಂತರ ಮಾರ್ಚ್ 11ರಂದು ಚರ್ಚೆ ಕೈಗೆತ್ತಿಕೊಳ್ಳಲಾಗುವುದೆಂದು ಸ್ಪೀಕರ್ ಓಂ ಬಿರ್ಲಾ ಹೇಳಿದರು. ಆದರೆ, ಕುಪಿತಗೊಂಡ ವಿರೋಧ ಪಕ್ಷಗಳ ಸದಸ್ಯರು ಸ್ಪೀಕರ್ ಪೀಠದ ಮುಂಭಾಗ ಧಾವಿಸಿ ಪ್ರತಿಭಟಿಸತೊಡಗಿದರು.

ಸದನದಲ್ಲಿ ಗದ್ದಲ ಹೆಚ್ಚಾದ ಕಾರಣ ಸದಸ್ಯರನ್ನು ಅಮಾನತು ಮಾಡುವುದಾಗಿ ಓಂ ಬಿರ್ಲಾ ಎಚ್ಚರಿಸಿದರು. ಅದಕ್ಕೆ ಸೊಪ್ಪು ಹಾಕದ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಬಿಜೆಪಿ ಸದಸ್ಯರತ್ತ ನುಗ್ಗಿದಾಗ ಕೋಲಾಹಲ ತಾರಕಕ್ಕೇರಿತು. ವಿಪಕ್ಷಗಳ ಇತರ ಸದಸ್ಯರೂ ಚೌಧರಿಗೆ ಸಾಥ್ ನೀಡಿದಾಗ ಅವರನ್ನು ತಡೆಯಲು ಬಿಜೆಪಿ ಸದಸ್ಯರು ಮುಂದಾದರು. ಇದರಿಂದ ಪರಿಸ್ಥಿತಿ ಬಿಗಡಾಯಿಸಿತು. ಎರಡು ಬಾರಿ ಮುಂದೂಡಿದ ನಂತರ ಮಧ್ಯಾಹ್ನ ಎರಡು ಗಂಟೆಗೆ ಸದನ ಮತ್ತೆ ಸೇರಿದಾಗ, ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ ಜನರ ಕಲ್ಯಾಣದ ಬಗ್ಗೆ ಚರ್ಚೆ ನಡೆಯಬೇಕಿರುವುದರಿಂದ ವಿಪಕ್ಷ ಸದಸ್ಯರು ತಮ್ಮ ಆಸನಗಳಿಗೆ ಮರಳಬೇಕೆಂದು ಸ್ಪೀಕರ ಸೂಚಿಸಿದರು. ವಿಪಕ್ಷ ಸದಸ್ಯರು 'ಬಿಜೆಪಿಗೆ ಧಿಕ್ಕಾರ', 'ಭಾರತ ಉಳಿಸಿ' ಘೋಷಣೆಗಳನ್ನು ಕೂಗಿದರು.